6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ

ಸಿ ಸಿ ಸಂಖ್ಯೆಃ 16837/2016

ಪಿರ್ಯಾದುದಾರರು ರಾಜ್ಯ ಪರಃ ಮೈಕೋಲೇಔಟ್ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು ಃ ಕಾರ್ತಿಕ್ ಅಲಿಯಾಸ್ ಅಪ್ಪು 26 ವರ್ಷ
ಬಿನ್ ಮುನಿಸ್ವಾಮಿ
ಬೆಂಗಳೂರು.

ಃದೋಷಾರೋಪಣೆಃ

ನಾನು ಕೆ.ಜಿ.ಚಿಂತ, ಬಿ.ಎಸ್.ಸಿ., ಎಲ್.ಎಲ್.ಬಿ, 6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಆದ ನಾನು ಈ ಕೆಳಕಂಡಂತೆ ನಿಮ್ಮ ಮೇಲೆ ಈ ದೋಷಾರೋಪಣೆ ಹೊರಿಸುತ್ತೇನೆಂದರೆಃ

ದಿನಾಂಕಃ 02.06.2015 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ಬಿಟಿಎಂ 2ನೇ ಹಂತ, 16ನೇ ಮೈನ್, ಐಶ್ವರ್ಯ ಬೇಕರಿ ಬಳಿ ಸಾಕ್ಷಿ-1 ರವರು ಬೈಕ್‌ನಲ್ಲಿ ಬಂದು ಕೆಳಗೆ ಇಳಿದಿದ್ದು, ಆರೋಪಿಯಾದ ನೀವು ಹುಡುಗಿಯ ಜೊತೆ ಜಗಳವಾಡುತ್ತಿದ್ದು, ಅದನ್ನು ಸಾಕ್ಷಿ-1 ರವರು ನೋಡುತ್ತಿದ್ದು, ಆರೋಪಿಯಾದ ನೀವು ಇತರ ಆರೋಪಿತನೊಂದಿಗೆ ಸೇರಿ ಸಾಕ್ಷಿ1 ರವರ ಮೇಲೆ ಗಲಾಟೆ ಮಾಡಿ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದು ನೀವು ಭಾದಂಸ ಕಲಂ 323 ರೆ ವಿ 34 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಎರಡನೆಯದಾಗಿ ಮೇಲೆ ಹೇಳಿದಂತೆ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಸಾಕ್ಷಿ-2 ರವರಿಗೆ ಆರೋಪಿಯಾದ ನೀವು ಹೆಲ್ಮೆಟ್‌ನಿಂದ ಸಾಕ್ಷಿ-2 ರವರ ಎಡಕಣ್ಣು ಮತ್ತು ಮೂಗಿನ

ಮೇಲೆ ಹೊಡೆದು ತೀವ್ರಸ್ವರೂಪದ ರಕ್ತಗಾಯಪಡಿಸಿದ ಕಾರಣ ಭಾದಂಸ ಕಲಂ 326 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಮೂರನೆಯದಾಗಿ, ಮೇಲೆ ಹೇಳಿದಂತೆ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಸಾಕ್ಷಿ-2 ರವರಿಗೆ ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿದ್ದು ಭಾದಂಸ ಕಲಂ 504 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 10.01.2018.

6ನೇ ಅ ಮು ಮ ದಂ
ಬೆಂಗಳೂರು

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತ?

ಉತ್ತರಃ ಹೌದು

ಪ್ರ 2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?

ಉತ್ತರಃ

ಆ)

(ಮೇಲ್ಕಾಣಿಸಿದ ಆರೋಪಿಗಳಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡದಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)

ದಿನಾಂಕಃ 10.01.2018.

6ನೇ ಅ ಮು ಮ ದಂ
ಬೆಂಗಳೂರು

6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ

ಸಿ ಸಿ ಸಂಖ್ಯೆಃ 14094/2017

ಪಿರ್ಯಾದುದಾರರು ರಾಜ್ಯ ಪರಃ ಮೈಕೋಲೇಔಟ್ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು ಃ ಎ1) ಸೆಲ್ವರಾಜ್ ಅಲಿಯಾಸ್ ಸೆಲ್ವ
ಬಿನ್ ಲೇಟ್ ಗೋವಿಂದರಾಜು, 35 ವರ್ಷ
ಬೆಂಗಳೂರು.

**ಃದೋಷಾರೋಪಣೆಃ**

ನಾನು ಕೆ.ಜಿ.ಚಿಂತ, ಬಿ.ಎಸ್.ಸಿ., ಎಲ್.ಎಲ್.ಬಿ, 6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಆದ ನಾನು ಈ ಕೆಳಕಂಡಂತೆ ನಿಮ್ಮ ಮೇಲೆ ಈ ದೋಷಾರೋಪಣೆ ಹೊರಿಸುತ್ತೇನೆಂದರೆಃ

ಮೊದಲನೆಯದಾಗಿ, ದಿನಾಂಕಃ 08.09.2016 ರಂದು ಸಂಜೆ 07.30 ಗಂಟೆಯ ಸಮಯದಲ್ಲಿ ಸಾಕ್ಷಿ-1ರವರು ಇದೇ ಬೆಂಗಳೂರು ನಗರ ಮೈಕೋಲೇಔಟ್ ಪೋಲಿಸ್ ಠಾಣೆಯ ಸರಹದ್ದಿಗೆ ಸೇರಿದ ಬಿಟಿಎಂ 1ನೇ ಹಂತ 20ನೇ ಮುಖ್ಯರಸ್ತೆ, 7ನೇ ಅಡ್ಡರಸೆತಯಲ್ಲಿರುವ ಮಿಲನ ಬೇಕರಿ ಎದುರಿರುವ ಜ್ಯೂಸ್ ಟ್ರಕ್ ಬೇಕರಿಯ ಮುಂಭಾಗದ ಆಟೋ ಸ್ಟಾಂಡ್‌ನಲ್ಲಿ ತಮ್ಮ ಆಟೋರಿಕ್ಷಾವನ್ನು ನಿಲ್ಲಿಸಿಕೊಂಡು ನಿಂತಿರುವಾಗ್ಗೆ, ಆರೋಪಿಯಾದ ನೀವು ಸಾಕ್ಷಿ-1 ರವರಿಂದ ಬಾಡಿಗೆಗೆ ಪಡೆದುಕೊಂಡಿದ್ದ ಆಟೋರಿಕ್ಕನ್ನು ತಂದು ನಿಲ್ಲಿಸಿ, ಯಾವುದೇ ಹಣ ಕೊಡುವುದು ಬಾಕಿಇಲ್ಲ ಎಂದು ಹೇಳಿದ್ದು, ಸಾಕ್ಷಿ-1 ರವರ ಬಾಡಿಗೆಯ ಬಾಬ್ತು ಹಣವನ್ನು ಕೊಡುವಂತೆ ಕೇಳಿದ್ದಕ್ಕೆ ಜಗಳ ತೆಗೆದು ಕೈಗಳಿಂದ ಹೊಡೆದು

ನೋವುಂಟು ಮಾಡಿದ ಕಾರಣ ನೀವು ಭಾದಂಸ ಕಲಂ 323 ರೆ ವಿ 34 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಎರಡನೆಯದಾಗಿ ಮೇಲೆ ಹೇಳಿದಂತೆ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಸಾಕ್ಷಿ-1 ರವರಿಗೆ ಆರೋಪಿಯಾದ ನೀವು ಬಲಗಣ್ಣಿನ ಮೇಲೆ ಗುದ್ದಿ, ಎಡ ಕೈಗೆ ಬಾಯಿಂದ ಕಚ್ಚಿ ರಕ್ತಗಾಯಪಡಿಸಿದ್ದು ಭಾದಂಸ ಕಲಂ 324 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಮೂರನೆಯದಾಗಿ ಮೇಲೆ ಹೇಳಿದಂತೆ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಸಾಕ್ಷಿ-1 ರವರಿಗೆ ಆರೋಪಿಯಾದ ನೀವು ಸೊಂಟದಲ್ಲಿಟ್ಟುಕೊಂಡು ಬಂದಿದ್ದ ಬಿಯರ್ ಬಾಟೆಲ್‌ನಿಂದ ಅವರ ಎಡಭಾಗದ ಕೆನ್ನೆಯ ಮೇಲೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಪಡಿಸಿದ್ದು ಭಾದಂಸ ಕಲಂ 326 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ನಾಲ್ಕನೆಯದಾಗಿ, ಮೇಲೆ ಹೇಳಿದಂತೆ, ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಸಾಕ್ಷಿ-1 ರವರಿಗೆ ಆರೋಪಿಯಾದ ನೀವು ಇನ್ನೊಂದು ಸರಿ ಹಣ ಕೊಡು ಎಂದು ಕೇಳಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣಬೆದರಿಕೆ ಹಾಕಿದ್ದು ಭಾದಂಸ ಕಲಂ 506 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 09.01.2018.

6ನೇ ಅ ಮು ಮ ದಂ
ಬೆಂಗಳೂರು

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತ?

ಉತ್ತರಃ ಹೌದು

ಪ್ರ 2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?

ಉತ್ತರಃ

ಅ)

(ಮೇಲ್ಕಾಣಿಸಿದ ಆರೋಪಿಗಳಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡದಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)

ದಿನಾಂಕಃ 09.01.2018.

6ನೇ ಅ ಮು ಮ ದಂ
ಬೆಂಗಳೂರು